## 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

**ಸತ್ರ ಪ್ರಕರಣ ಸಂಖ್ಯೆ.32/2025**

ಪಿರ್ಯಾದುದಾರರು : ಕೊಪ್ಪ ಪೊಲೀಸ್ ಠಾಣೆ.

- ವಿರುದ್ಧ -

ಆರೋಪಿಗಳು : ಶ್ರೀ ಬುಡ್ಡೇಗೌಡ ಮತ್ತು ಇತರರು.

: **ದೋಷಾರೋಪಣೆ** :

ನಾನು ಶ್ರೀಮತಿ ಸಯೀದುನ್ನೀಸ, ಎಂ.ಎ., ಎಲ್‌ಎಲ್.ಬಿ., 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ :

ನೀವು ಆರೋಪಿಗಳು :

1. ಶ್ರೀ ಬುಡ್ಡೇಗೌಡ, 60 ವರ್ಷ,
   ಬಿನ್ ಮೋಟೇಗೌಡ.

2. ಶ್ರೀಮತಿ ಸುಜಯ, 50 ವರ್ಷ,
   ಕೋಂ. ಬುಡ್ಡೇಗೌಡ.

3. ಶ್ರೀ ಬೆಟ್ಟೇಗೌಡ, 55 ವರ್ಷ,
   ಬಿನ್ ಲೇಟ್ ಮಾದೇಗೌಡ.

   ಆ 1 ರಿಂದ 3 ವಾಸಃ ಹೊಸಕೊಪ್ಪಲು ಗ್ರಾಮ,
   ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕು,
   ಮಂಡ್ಯ ಜಿಲ್ಲೆ.

4. ಶ್ರೀರಾಜು ಬಿ. ಉಃ ರಾಜೇಗೌಡ, 25 ವರ್ಷ,
   ಬಿನ್ ಬುಡ್ಡೇಗೌಡ.
   ವಾಸಃ ನಂ.342, 1ನೇ ಮುಖ್ಯರಸ್ತೆ,
   2ನೇ ಅಡ್ಡರಸ್ತೆ, ಕಮಲಾನಗರ,
   ಬೆಂಗಳೂರು ಉತ್ತರ.

5. ಶ್ರೀಮತಿ ಗೌರಿ ಉಃ ಆಶಾ ಹೆಚ್.ಬಿ., 30 ವರ್ಷ,
   ಕೋಂ. ಪ್ರಕಾಶ,
   ವಾಸಃ 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ,
   ಸರ್ಕಾರಿ ಶಾಲೆ ಹತ್ತಿರ, ಕಮಲಾನಗರ,
   ಬೆಂಗಳೂರು ಉತ್ತರ.

ಮೊದಲನೆಯದಾಗಿ, ದಿನಾಂಕ:01.01.2019 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೊಸಕೊಪ್ಪಲು ಗ್ರಾಮದಲ್ಲಿ ಚಾಸಾ-1 ಯಶಂವತ, ಚಾಸಾ-2 ಕುಮಾರ, ಚಾಸಾ-3 ಚಿಕ್ಕವರದೇಗೌಡ, ಚಾಸಾ-4 ದೊಡ್ಡ ತಾಯಮ್ಮರವರು ತಮ್ಮ ಬಾಬ್ತು ಎತ್ತಿನಗಾಡಿಯಲ್ಲಿ ಭತ್ತವನ್ನು ತುಂಬಿಕೊಂಡು ಹೋಗುತ್ತಿದ್ದಾಗ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಅಕ್ರಮ ಗುಂಪು ಕಟ್ಟಿಕೊಂಡು ಅಲ್ಲಿಗೆ ಬಂದು ನಿಮ್ಮ ಮನೆಯ ಮುಂದೆ ಭತ್ತ ಹೊಡೆದುಕೊಂಡು ಹೋಗಬೇಡಿ ಎಂದು ಚಾಸಾ-1 ರಿಂದ 4 ರವರೊಂದಿಗೆ ಗಲಾಟೆ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.143 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಚಾಸಾ-1 ರಿಂದ 4 ರವರು ಬೇರೆ ದಾರಿಯಲ್ಲಿ ಹೋಗುತ್ತಿರುವಾಗ ಆರೋಪಿತರಾದ ನೀವುಗಳು ಏಕೋದ್ದೇಶ ಹೊಂದಿ ಎತ್ತಿನಗಾಡಿ ಮುಂದೆ ಹೋಗದಂತೆ ಅಕ್ರಮವಾಗಿ ಅಡ್ಡಗಟ್ಟಿ ತಡೆದಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.341 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಹೊಂದಿ 1ನೇ ಆರೋಪಿಯಾದ ನೀವು ಕೊಡಲಿಯಿಂದ ಚಾಸಾ-1 ರವರ ಬಲ ಅಂಗೈಗೆ ಹೊಡೆದು ತೀವ್ರ ಸ್ವರೂಪದ ರಕ್ತ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಹೊಂದಿ 3 ಮತ್ತು 4ನೇ ಆರೋಪಿತರಾದ ನೀವು ಚಾಸಾ-2 ರಿಂದ 4 ರವರಿಗೆ ಕೈಯಿಂದ ಮೈಕೈ ಮೇಲೆ ಹೊಡೆದು, ಅವರನ್ನು ಬಲವಾಗಿ

ತಳ್ಳಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಐದನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಹೊಂದಿ 2 ಮತ್ತು 5ನೇ ಆರೋಪಿತರಾದ ನೀವು ಶಾಂತಿ ಭಂಗವನ್ನು ಪ್ರಚೋದಿಸುವ ಉದ್ದೇಶದಿಂದ ಉದ್ದೇಶಪೂರ್ವಕ ಅವಮಾನ ಮಾಡುವ ಸಲುವಾಗಿ ಚಾಸಾ-4 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಆರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಹೊಂದಿ 2 ಮತ್ತು 5ನೇ ಆರೋಪಿತರಾದ ನೀವು ಸಾರ್ವಜನಿಕವಾಗಿ ಚಾಸಾ-4 ರವರ ಮುಂದಲೆ ಹಿಡಿದು ಎಳೆದಾಡಿ ಅವರಿಗೆ ಅವಮಾನವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.354 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಚಾಸಾ-1 ರಿಂದ 4 ರವರಿಗೆ ಭಯ ಬರುವ ರೀತಿಯಲ್ಲಿ ಅವರನ್ನು ಉದ್ದೇಶಿಸಿ 'ಇನ್ನೊಮ್ಮೆ ಈ ದಾರಿಯಲ್ಲಿ ಗಾಡಿ ಹೊಡೆದುಕೊಂಡು ಬಂದರೆ ನಿಮ್ಮನ್ನು ಇಲ್ಲೇ ಗತಿ ಕಾಣಿಸಿ ಬಿಡುತ್ತೇವೆ' ಎಂದು ಜೀವ ಬೆದರಿಕೆಯನ್ನು ಹಾಕಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಈ ಮೇಲೆ ಹೇಳಿರುವ ದೋಷಾರೋಪಣೆ ಬಗ್ಗೆ ನಿಮ್ಮ ವಿಚಾರಣೆ ಈ ನ್ಯಾಯಾಲಯದಲ್ಲಿ ನಡೆಯತಕ್ಕದ್ದು ಎಂದು ಆದೇಶಿಸಲಾಗಿದೆ.

(ಸಯೀದುನ್ನೀಸ)
ದಿನಾಂಕ:**18.06.2025.** **2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.